(ಇಂದು ದಿನಾಂಕಃ 08–10–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-

ನಾನು ಬಿಕಾಂ ಪದವಿ ಹೊಂದಿರುತ್ತೇನೆ. ನಾನು ಎದುರುದಾರನ ಮನೆಯನ್ನು ಬಿಟ್ಟು ನನ್ನ ತವರೂ ಮನೆಗೆ 2020 ರಲ್ಲಿ ಹೋಗಿರುತ್ತೇನೆ. ನಾನು ನನ್ನ ತವರೂ ಮನೆಗೆ ಹೋದಾಗ ಎದುರುದಾರನು ನನಗೆ ವಕೀಲರ ಮೂಲಕ ನೋಟಿಸ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಸನ್ನು 3-4 ತಿಂಗಳಗಳ ನಂತರದಲ್ಲಿ ನೀಡಿರುತ್ತಾರೆ. ಸದರಿ ನೋಟಿಸನಲ್ಲಿ ನನಗೆ ಎದುರುದಾರನ ಸಂಗಡ ಜೀವನ ಸಾಗಿಸಲು ಎದುರುದಾರನ ಮನೆಗೆ ಬರಲು ಕೋರಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಗೆ ನಾನು ವಕೀಲರ ಮೂಲಕ ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟಿಸ ಪ್ರತಿ ಹಾಗೂ ನೋಟಿಸಗೆ ಕೊಟ್ಟ ಉತ್ತರವನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ.

ನಾನು ನೋಟಿಸ ಸ್ವೀಕರಿಸಿದ ನಂತರದಲ್ಲಿ ಎದುರುದಾರನ ಸಂಗಡ ಜೀವನ ಸಾಗಿಸಲು ಹೋಗಿರುವುದಿಲ್ಲ ಕಾರಣ ಅವರು ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ. ಎದುರುದಾರನು ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಎದುರುದಾರನು ನನ್ನ ವಿರುದ್ಧ ಮಾನ್ಯ 1 ನೇ ಅಧಿಕ ಕೌಟಂಬಿಕ ನ್ಯಾಯಾಲಯ ವಿಜಯಪುರದಲ್ಲಿ ಎಂ.ಸಿ. ಸಂಖ್ಯೆ 125/2020 ದಾಖಲಿಸಿರುತ್ತಾನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರು ಆಗಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ನನ್ನ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣವು ದಿನಾಂಕ 08-12-2022 ರಂದು ಇತ್ಯರ್ಥಗೊಂಡಿದೆ ಎಂದರೆ ಸರಿ. ಸದರಿ ಆದೇಶದಲ್ಲಿ ಆದೇಶದ ದಿನದಿಂದ 30 ದಿನಗಳೊಗೆ ನಾನು ಎದುರುದಾರನ ಸಂಗಡ ಹೋಗಿ ವೈವಾಹಿಕ ಜೀವನ ಸಾಗಿಸಲು ನಿರ್ದೇಶನವಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಯಾವುದೇ ಮೆಲ್ಮನವಿಯನ್ನು ಸಲ್ಲಿಸಿಲ್ಲ.

ಸದರಿ ಆದೇಶದ ದಿನದಿಂದ ಇಲ್ಲಿಯವರೆಗೆ ನಾನು ಎದುರುದಾರನ ಸಂಗಡ ಜೀವನ ಸಾಗಿಸಲು ಹೋಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆತನು ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ ಅಂದರೆ ಸರಿಯಲ್ಲ. ಎದುರುದಾರನು ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ವಿವಾಹದ ನಂತರ ಎದುರುದಾರನು ನನ್ನನ್ನು ಜೀವನ ಸಾಗಿಸಲು ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿ. ನಾನು 02 ತಿಂಗಳಗಳ ಕಾಲ ಎದುರುದಾರನ ಸಂಗಡ ಜೀವನ ಸಾಗಿಸಿ ನಂತರ ಆತನ ಸಂಗಡ ಜಗಳ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರ ಜಗಳ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಜಗಳವನ್ನು ಆಲೋಕಿಸಿ ಮನೆಯ ಹಿರಿಯರು ಬುದ್ದಿ ಮಾತನ್ನು ಹೇಳಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರನೇ ಪ್ರಚೋದನೆ ನೀಡಿರುತ್ತಾನೆ ಎಂದು ನುಡಿಯುತ್ತಾರೆ. ಎದುರುದಾರನು ಪ್ರಚೋದನೆ ಮಾಡಿರುತ್ತಾನೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಹಿರಿಯರು ಬುದ್ದಿ ಮಾತನ್ನು ಹೇಳಿದಾಗ ನಾನು ಅವರಿಗೆ ಎದುರುದಾರನು ನನಗೆ ಬೇರೆ ಮನೆ ಮಾಡಿಕೊಟ್ಟಲ್ಲಿ ಮಾತ್ರ ಚೆನ್ನಾಗಿ ಜೀವನ ಸಾಗಿಸುತ್ತೇನೆ ಎಂದು ಹೇಳಿರುತ್ತೇನೆ ಅಂದರೆ ಸರಿಯಲ್ಲ.

ನಾನು ಪ್ರಸ್ತಾಪ ಇಟ್ಟ ನಂತರ ಎದುರುದಾರನು ಸ್ವಾಮಿ ಅನ್ನೋವರ ಮನೆಯಲ್ಲಿ ಬಾಡಿಗೆಗೆ ಪಡೆದುಕೊಂಡು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿಯು ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದು ಸರಿ ಆದರೆ ನನ್ನ ಪ್ರಸ್ತಾಪಕ್ಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಮನೆಯಲ್ಲಿ ನಾವು ಕೇವಲ 08 ದಿನ ಮಾತ್ರ ಇದ್ದೆವು. ಸದರಿ 08 ದಿನಗಳ ಕಾಲದಲ್ಲಿ ನನ್ನ ಅಜ್ಜಿಯವರು ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿ.

ನನ್ನ ಅಜ್ಜಿಯ ಕ್ಷೇಮ ವಿಚಾರಿಸಲು ಹೋಗಿ ಬರುತ್ತೇನೆ ಎಂದು ನಾನೇ ಸ್ವತಃ ದಿನಾಂಕ 27-11-2019 ರಂದು ಹೋಗಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರನೇ ಸ್ವತಃ ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ಅಜ್ಜಿಯ ಕ್ಷೇಮ ವಿಚಾರಿಸಲು ನಾನು ಹೋದ ನಂತರದಲ್ಲಿ ಇಲ್ಲಿಯವರೆಗೆ ನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿ. ಎದುರುದಾರನು ನನಗೆ ಜೀವನ ಸಾಗಿಸಲು ವಕೀಲರ ಮೂಲಕ ನೋಟಿಸ ನೀಡಿದರು ಸಹ ನಾನು ಉದ್ದೇಶ ಪೂರಕವಾಗಿ ಆತನ ಸಂಗಡ ಹೋಗಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಮಾನ್ಯ ಕೌಟಂಬಿಕ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆದೇಶದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಎದುರುದಾರನ ಜೊತೆಯನ್ನು ಬಿಟ್ಟು ಹೋದ ನಂತರದಲ್ಲಿ ಮತ್ತು ನೋಟಿಸ ನೀಡಿದರು ಸಹ ಬರದೇ ಇದ್ದ ಕಾರಣ ಎದುರುದಾರನು ನನ್ನ ವಿರುದ್ದ ಮಾನ್ಯ ವಿಜಯಪುರ ನ್ಯಾಯಾಲಯದಲ್ಲಿ ಎಂ.ಸಿ. ಸಂಖ್ಯೆ 125/2020 ದಾಖಲಿಸಿರುತ್ತಾನೆ ಅಂದರೆ ಸರಿಯಲ್ಲ.

ಸದರಿ ಎಂ.ಸಿ. ಸಂಖ್ಯೆ 125/2020 ದಾಖಲಿಸಿದ ನಂತರದಲ್ಲಿ ನಾನು ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

ನಾನು ಎದುರುದಾರನ ಸಂಗಡ ದಾಂಪತ್ಯ ಜೀವನ ಸರಿಯಾಗಿ ಪಾಲಿಸದೇ ಇದ್ದ ಕಾರಣ ನಾನು ಗರ್ಭವತಿ ಆಗಿರುವುದಿಲ್ಲ ಅಂದರೆ ಸರಿಯಲ್ಲ.

ಎದುರುದಾರನಿಗೆ ಇವತ್ತಿನವರೆಗೂ ನನ್ನ ಮೇಲೆ ಪ್ರೀತಿ, ವಿಶ್ವಾಸ, ನಂಬಿಕೆ ಇಟ್ಟುಕೊಂಡಿದ್ದು ಇಂದಿಗೂ ನಾನು ಆತನ ಸಂಗಡ ಹೋದರೆ ಜೀವನ ಸಾಗಿಸಲು ತಯಾರಿರುತ್ತಾನೆ ಎಂದರೆ ಸಾಕ್ಷಿಯು ಎದುರುದಾರನ ಸಂಗಡ ಜೀವನ ಸಾಗಿಸುತ್ತೇನೆ ಆದರೆ ಅಲ್ಲಿ ಹೋಗುವುದಿಲ್ಲ ಏಕೆಂದರಲಿ ಅಲ್ಲಿ ನನಗೆ ಕಿರುಕುಳ ನೀಡಿರುತ್ತಾರೆ ಮತ್ತು ಜೀವದ ಬೆದರಿಕೆ ಇರುತ್ತದೆ ಎಂದು ನುಡಿಯುತ್ತಾರೆ.

ನನಗೆ ಕಿರುಕುಳ ನೀಡಿದ ಬಗ್ಗೆ ನಾನು ಯಾವುದೇ ದೂರನ್ನು ನೀಡಿಲ್ಲ. ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ದಾಂಪತ್ಯ ಜೀವನದಲ್ಲಿ ಇಂದು ಅಥವಾ ನಾಳೆ ಸರಿ ಹೋಗುವುದು ಎಂದು ನಾನು ದೂರು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಎದುರುದಾರನು ನನಗೆ ಯಾವುದೇ ಕಿರುಕುಳ ಅಥವಾ ಬೆದರಿಕೆ ನೀಡಿಲ್ಲ ಇಂದಿಗೂ ಆತನು ನನ್ನ ಸಂಗಡ ಜೀವನ ಸಾಗಿಸಲು ಸಿದ್ಧನಿರುತ್ತಾನೆ ಅಂದರೆ ಸರಿಯಲ್ಲ.

ನನ್ನ ಮತ್ತು ಎದುರುದಾರನ ವಯಸ್ಸು ಸಣ್ಣ ವಯಸಿದ್ದು ಇನ್ನು ಮಕ್ಕಳು ಇಲ್ಲದೇ ಇದ್ದ ಕಾರಣ ಪ್ರಕರಣವನ್ನು ಸ್ವಲ್ಪ ದಿನಗಳ ಕಾಲ ಬಾಕಿ ಇಟ್ಟು ಆತನ ಸಂಗಡ ಜೀವನ ಸಾಗಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಜೀವದ ಬೆದರಿಕೆ ಇರುತ್ತದೆ ಸದರಿ ಬೆದರಿಕೆಯು ಹೋಗುವವರೆಗೂ ಮತ್ತು ನನಗೆ ಜೀವದ ರಕ್ಷಣೆಯ ಆಶ್ವಾಸನೆ ಇರುವವರೆಗೂ ನಾನು ಇಲ್ಲಿಯೆ ವಾಸ ಮಾಡುತ್ತೇನೆ ಎಂದು ನುಡಿಯುತ್ತಾರೆ.

ನನ್ನಿಂದ ಎದುರುದಾರನಿಗೆ ಜೀವ ಬೆದರಿಕೆ ಇರುತ್ತದೆ ಅಂದರೆ ಸರಿಯಲ್ಲ. ಎದುರುದಾರನು ಮುಗ್ಧ ಸ್ವಭಾವನಾಗಿರುತ್ತಾನೆ ಮತ್ತು ವಿದ್ಯಾವಂತನಾಗಿರುತ್ತಾನೆ ಅಂದರೆ ಸರಿಯಲ್ಲ. ಎದುರುದಾರನು ಐಟಿಐ ಪದವಿ ಹೊಂದಿರುತ್ತಾನೆ. ನನ್ನ ವಿದ್ಯಾರ್ಹತೆಯು ಎದುರುದಾರನ ವಿದ್ಯಾರ್ಹತೆಕ್ಕಿಂತ ಹೆಚ್ಚಾಗಿದೆ ಅಂದರೆ ಸರಿಯಲ್ಲ.

ಎದುರುದಾರನು ನನಗೆ ಯಾವುದೇ ಜೀವ ಬೆದರಿಕೆ ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ಜೀವ ಬೆದರಿಕೆ ನೀಡಿದ ಬಗ್ಗೆ ನಾನು ಯಾವುದೇ ಕ್ರಮ ಕೈಗೊಂಡಿಲ್ಲ. ಸಾಕ್ಷಿಯ ಮುಂದುವರೆದು ಇಂದು ಅಥವಾ ನಾಳೆ ಸರಿ ಹೋಗುತ್ತದೆ ಎಂದು ನಾನು ಸಹಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ಅರ್ಜಿಯಲ್ಲಿ ನನ್ನ 05 ತೊಲೆ ಬಂಗಾರ ಆಭರಣವನ್ನು ಕಸಿದುಕೊಂಡು ಇದ್ದ ಬಟ್ಟೆಯಲ್ಲಿ ಮನೆಯಿಂದ ಹೊರ ಹಾಕಿರುತ್ತಾನೆ ಎಂದು ನಮೂದು ಮಾಡಿದ್ದು ಅದು ಯಾವ ದಿನಾಂಕ ಮತ್ತು ಯಾವ ಸ್ಥಳದಲ್ಲಿ ಮಾಡಿದ್ದು ಎಂದು ಕೇಳಲಾಗಿ ಸಾಕ್ಷಿಯು ವಿವಾಹದ 5-6 ತಿಂಗಳ ಬಳಿಕ ಎದುರುದಾರನ ಮನೆಯಲ್ಲಿ ನಡೆದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ಯಾವುದೇ ದೂರು ನೀಡಿಲ್ಲ. ಈ ಮೇಲೆ ಹೇಳಿದ 05 ತೊಲೆ ಬಂಗಾರದಲ್ಲಿ 01 ಚೈನು ಒಂದೂವರೆ ತೊಲೆ ತೂಕ ಮತ್ತು 01 ಉಂಗರ ಅರ್ದ ತೊಲೆ ತೂಕ ಇತ್ತು.

ಎದುರುದಾರನ ಮನೆಯು ಊರಿನಿಂದ ಸುಮಾರು 2-3 ಕೀಲೋಮೀಟರ ಹೊರಗೆ ಇದ್ದ ಕಾರಣ ಸುತ್ತ ಮುತ್ತ ಹೆಚ್ಚು ಮನೆ ಇರಲಿಲ್ಲ.

ನನ್ನ ಮುಖ್ಯ ಅರ್ಜಿಯ 4 ನೇ ಕಂಡಿಕೆಯಲ್ಲಿ ನಮೂದು ಮಾಡಿದ ಹಿರಿಯರ ಹೆಸರು ಬೀಮರೆಡ್ಡಿ ಮುಳ್ಳೂರು ಹಾಗೂ ಶಿವಾನಂಕ ವೆಂಕರೆಡ್ಡಿ ಇರುತ್ತದೆ.

ನಾನು ನನ್ನ ತವರಿಗೆ ಬಂದ 3-4 ತಿಂಗಳದ ನಂತರದಲ್ಲಿ ಜಾವೂರಿನ ಹಿರಿಯರು ಎದುರುದಾರನ ಮನೆಗೆ ಹೋಗಿರುತ್ತಾರೆ.

ನನ್ನ ಮುಖ್ಯ ಅರ್ಜಿಯ 4 ನೇ ಕಂಡಿಕೆಯಲ್ಲಿ ಹೊಸರು ಗ್ರಾಮಕ್ಕೆ ಹೋದಾಗ ಎದುರುದಾರನ ಹಿರಿಯರು ಯಾರು ಇರಲಿಲ್ಲ. ಸದರಿ ವಿಷಯವನ್ನು ನನ್ನ ಮುಖ್ಯ ಅರ್ಜಿಯಲ್ಲಿ ನಮೂದು ಮಾಡಿಲ್ಲ.

ಎದುರುದಾರನ ತಂದೆಯವರೆಗೆ 03 ಜನ ಮಕ್ಕಳು ಅದರಲ್ಲಿ 02 ಗಂಡು ಮಕ್ಕಳು ಹಾಗೂ 01 ಹೆಣ್ಣುಮಗು. ಎದುರುದಾರನ ತಂದೆ ತಾಯಿ ಜೀವಂತ ಇರುತ್ತಾರೆ.

ನನ್ನ ಮುಖ್ಯ ಅರ್ಜಿಯ 5 ನೇ ಕಂಡಿಕೆಯಲ್ಲಿ ಎದುರುದಾರನಿಗೆ ಜಮೀನು ಇದ್ದ ಬಗ್ಗ ನಾನು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಜಮೀನುಗಳು ಎದುರುದಾರನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಜಮೀನುಗಳು ಎದುರುದಾರನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ನನ್ನ ಮುಖ್ಯ ಅರ್ಜಿಯಲ್ಲಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**